FD/178/2024-DS-BR-FINANCE DEPT.SEC

# ಕರ್ನಾಟಕ ವಿಧಾನ ಪರಿಷತ್ತು

1/721913/2024

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1288
2. ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.(ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 19.12.2024.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರದ ರಾಜಸ್ವ ವೆಚ್ಚದ ಹೆಚ್ಚಳದಿಂದಾಗಿ ಶೇಕಡವಾರು ಬಂಡವಾಳ ವೆಚ್ಚದಲ್ಲಿ ಕುಸಿತ ಕಂಡಿದೆಯೇ; | ರಾಜ್ಯದ ಬದ್ಧ ವೆಚ್ಚಗಳಾದ ವೇತನ, ಪಿಂಚಣಿ, ಬಡ್ಡಿ ಮರುಪಾವತಿ, ಸಹಾಯಧನ ಹಾಗು ಇತರೆ ಬದ್ಧವೆಚ್ಚಗಳ ಹೆಚ್ಚಳದಿಂದ ರಾಜಸ್ವ ವೆಚ್ಚವು ಹೆಚ್ಚಳವಾಗಿರುತ್ತದೆ.<br><br>ಸರ್ಕಾರವು ರಾಜಸ್ವ ವೆಚ್ಚವನ್ನು ಸಾಧ್ಯವಾದಷ್ಟು ಮಟ್ಟಕ್ಕೆ ನಿಯಂತ್ರಿಸುವುದರ ಮೂಲಕ ಬಂಡವಾಳ ವೆಚ್ಚಕ್ಕೂ ಪ್ರಾಮುಖ್ಯತೆ ನೀಡಿರುತ್ತದೆ. 2023-24 ರ ಆಯವ್ಯಯದಲ್ಲಿ ಬಂಡವಾಳ ವೆಚ್ಚಕ್ಕೆ 54,374 ಕೋಟಿ ರೂ.ಗಳನ್ನು ಅಂದಾಜಿಸಲಾಗಿತ್ತು. 2024-25 ರ ಆಯವ್ಯಯದಲ್ಲಿ ಬಂಡವಾಳ ವೆಚ್ಚವು 55,877 ಕೋಟಿ ರೂ.ಗಳಿಗೆ ಹೆಚ್ಚಳವಾಗಿರುತ್ತದೆ. 2023-24 ರ ಆಯವ್ಯಯ ಅಂದಾಜಿಗೆ ಹೋಲಿಸಿದರೆ 2024-25 ರಲ್ಲಿ ಬಂಡವಾಳ ವೆಚ್ಚವು ಹೆಚ್ಚಳವಾಗಿರುತ್ತದೆಯೇ ಹೊರತು ಕುಸಿತ ಕಂಡಿರುವುದಿಲ್ಲ. |
| ಆ | ಪ್ರಸ್ತುತ ಸರ್ಕಾರವು ಬಂಡವಾಳ ವೆಚ್ಚದ ಕೊರತೆಯಿಂದಾಗಿ ಯಾವ ಯಾವ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಕೈಬಿಟಿದೆ (ಇಲಾಖಾವಾರು ವಿವರ ಹಾಗೂ ಮೊತ್ತವನ್ನು ತಿಳಿಸುವುದು) | 2023-24 ರ ಆಯವ್ಯಯ ಅಂದಾಜಿಗೆ ಹೋಲಿಸಿದರೆ 2024-25 ರಲ್ಲಿ ಬಂಡವಾಳ ವೆಚ್ಚವು ಹೆಚ್ಚಳವಾಗಿರುತ್ತದೆ. ಆಯವಯ್ಯದಲ್ಲಿ ಅಂದಾಜಿಸಿರುವಂತೆ ಬಂಡವಾಳ ವೆಚ್ಚಕ್ಕೆ ಅಗತ್ಯ ಅನುದಾನ ಒದಗಿಸಲಾಗಿರುತ್ತದೆಯೇ ಹೊರತು ಅನುದಾನದಲ್ಲಿ ಯಾವುದೇ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಕೊರತೆಯಾಗಿರುವುದಿಲ್ಲ. |
| ಇ) | ಬಂಡವಾಳದ ಕೊರತೆಯಿಂದಾಗಿ ಭೌತಿಕ ಗುರಿಗಳನ್ನು ಯಾವ ಯಾವ ಯೋಜನೆ ಹಾಗೂ ಕಾರ್ಯಕ್ರಮಗಳಲ್ಲಿ ಕಡಿತ ಮಾಡಲಾಗಿದೆ (ಇಲಾಖಾವಾರು ವಿವರ ಹಾಗೂ ಮೊತ್ತವನ್ನು ತಿಳಿಸುವುದು) | ಅನ್ವಯಿಸುವುದಿಲ್ಲ |
| ಈ | ರಾಜಸ್ವ ವೆಚ್ಚದ ಹೆಚ್ಚಳವನ್ನು ಬೆಲೆ ಏರಿಕೆ ಹಾಗೂ ಹಣದುಬ್ಬರದಿಂದ ಸರಿಪಡಿಸಿಕೊಳ್ಳುವುದು ವೈಜ್ಞಾನಿಕ ವಿಧಾನವೇ? | ರಾಜಸ್ವ ವೆಚ್ಚದ ಹೆಚ್ಚಳಕ್ಕೂ ಬೆಲೆ ಏರಿಕೆ ಅಥವಾ ಹಣದುಬ್ಬರಕ್ಕೂ ಸಂಬಂಧವಿರುವುದಿಲ್ಲ. |

FD/178/2024-DS-BR-FINANCE DEPT.SEC

(ಸಿದ್ದರಾಮಯ್ಯ)
ಮುಖ್ಯಮಂತ್ರಿ